# • ಸುದ್ದಿ ಸಂಚಯ •

## ರಾಮಕೃಷ್ಣ ಮಠ ಮತ್ತು ಮಿಷನ್‌ನ ಪರಿಹಾರ ಕಾರ್ಯಗಳ ೨೦೦೭–೨೦೦೮ ವರ್ಷದ ವರದಿ

ಇತ್ತೀಚೆಗೆ **ದೇಶದ ವಿವಿಧಭಾಗಗಳಲ್ಲಿ** ಉಂಟಾದ ಭಾರೀ ಪ್ರವಾಹದಲ್ಲಿ ಸಂತ್ರಸ್ತ ಜನರಿಗೆ ರಾಮಕೃಷ್ಣ ಮಠ ಮತ್ತು ಮಿಷನ್ ತನ್ನ ಹಲವಾರು ಕೇಂದ್ರಗಳ ಮೂಲಕ ಪರಿಹಾರವನ್ನು ನೀಡಿದೆ. **ಅಸ್ಸಾಂ ರಾಜ್ಯದ ಗುವಾಹಟಿ, ಕರೀಮ್ ಗಂಜ್, ನರೋತ್ತಮ ನಗರ ಮತ್ತು ಸಿಲ್‌ಚರ್** ಕೇಂದ್ರಗಳ ಮೂಲಕ ೩,೧೪೫ ಕುಟುಂಬಗಳಿಗೆ ವಿವಿಧ ಗೃಹೋಪಯೋಗಿ ಸಾಮಗ್ರಿಗಳನ್ನು ನೀಡಲಾಯಿತು. ಅದಲ್ಲದೆ, ೭೩ ಗ್ರಾಮಗಳಿಗೆ ಸೇರಿದ ೧೧,೯೫೩ ರೋಗಿಗಳಿಗೆ ವೈದ್ಯಕೀಯ ಸಹಾಯವನ್ನು ನೀಡಲಾಯಿತು. **ಬಿಹಾರ ರಾಜ್ಯದ ಛಾಪ್ರಾ, ಮುಜಫರ್‌ಪುರ್ ಮತ್ತು ಪಾಟ್ನಾ ಕೇಂದ್ರಗಳ** ಮೂಲಕ ೩೦೭ ಗ್ರಾಮಗಳಿಗೆ ಸೇರಿದ ೨೨,೦೯೬ ಕುಟುಂಬಗಳಿಗೆ, ಬೇಯಿಸಿದ ಆಹಾರವನ್ನೂ, ಅಹಾರಧಾನ್ಯ ಮುಂತಾದ ಗೃಹಸಾಮಗ್ರಿಗಳನ್ನೂ ಮತ್ತು ವಿವಿಧ ವಯೋಮಾನದವರಿಗೆ ಬೇಕಾದ ಬಟ್ಟೆಗಳನ್ನೂ ಒದಗಿಸಲಾಯಿತು. **ಗುಜರಾತಿನ ರಾಜಕೋಟ್, ಲಿಂಬ್ಡಿ ಮತ್ತು ಪೋರ್‌ಬಂದರ್ ಕೇಂದ್ರಗಳು** ಹಲವು ನಗರಗಳಲ್ಲಿರುವ ಕೊಳಚೆಗೇರಿಗಳಲ್ಲಿ ವಾಸಿಸುತ್ತಿರುವ ೯೭೭ ಕುಟುಂಬಗಳ ೨೬,೧೫೮ ಜನರಿಗೆ, ಹಲವಾರು ರೀತಿಯ ಆಹಾರ ಮತ್ತು ಗೃಹೋಪಯೋಗಿ ಸಾಧನಗಳನ್ನು ಒದಗಿಸಿದವು. **ಕರ್ನಾಟಕದ ಪೊನ್ನಂಪೇಟೆ** ಕೇಂದ್ರದ ವತಿಯಿಂದ ಕೊಡಗು ಪ್ರದೇಶದ ೨೧ ಹಳ್ಳಿಗಳ ೬೫೬ ಪ್ರವಾಹ ಪೀಡಿತರಿಗೆ ಕಂಬಳಿ ಮತ್ತು ಶಾಲುಗಳನ್ನು ವಿತರಿಸಲಾಯಿತು. **ಕೇರಳದ ಕ್ಯಾಲಿಕಟ್ ಕೇಂದ್ರವು** ಕನ್ನಡಿಕಲ್ ಎಂಬ ಗ್ರಾಮದ ೬೦ ಸಂತ್ರಸ್ತ ಕುಟುಂಬಗಳಿಗೆ ವಿವಿಧರೀತಿಯ ನೆರವು ನೀಡಿತು. **ಒರಿಸ್ಸಾದ ಭುವನೇಶ್ವರ ಕೇಂದ್ರದಿಂದ** ಜಾಜ್ಪುರ, ಬಾಲಸೋರ್ ಮತ್ತು ಕಟಕ್ ಜಿಲ್ಲೆಗಳ ೧೨ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ೧,೬೬೫ ಪ್ರವಾಹ ಸಂತ್ರಸ್ತರಿಗೆ ವಿವಿಧ ಗೃಹೋಪಯೋಗಿ ಸಾಮಗ್ರಿಗಳನ್ನು ಒದಗಿಸಲಾಯಿತು.



**ಪಶ್ಚಿಮ ಬಂಗಾಳ ರಾಜ್ಯದಲ್ಲಿ** ಪ್ರವಾಹ ಪರಿಹಾರ ಕಾರ್ಯಗಳು ಅತಿ ದೊಡ್ಡ ಪ್ರಮಾಣದಲ್ಲಿ ನಡೆದವು. ೪೪೨ ಹಳ್ಳಿಗಳ ೧,೩೧,೦೭೫ ಸಂತ್ರಸ್ತ ಕುಟುಂಬಗಳಿಗೆ ವಿವಿಧ ಆಹಾರ ಪದಾರ್ಥಗಳು, ಗೃಹೋಪಯೋಗಿ ಸಾಮಗ್ರಿಗಳು, ಕುಡಿಯುವ ನೀರು ಮುಂತಾದವುಗಳನ್ನು ಒದಗಿಸಲಾಯಿತು. **ನೆರೆಯ ಬಾಂಗ್ಲಾದೇಶದಲ್ಲೂ** ಕೂಡ, ೨೯ ಜಿಲ್ಲೆಗಳಿಗೆ ಸೇರಿದ ೮೩,೭೬೫ ಕುಟುಂಬಗಳಿಗೆ, ೧೫೬ ವಿತರಣಾ ಕೇಂದ್ರಗಳ ಮೂಲಕ ೨೦ ಲಕ್ಷ ಕೆ.ಜಿ. ಅಕ್ಕಿ, ೧,೫೦೦ ಕೆ.ಜಿ. ಅವಲಕ್ಕಿ ಮತ್ತು ೨೫೦ ಕೆ.ಜಿ. ಸಕ್ಕರೆಯನ್ನು ವಿತರಿಸಲಾಯಿತು.

ಈ ಪರಿಹಾರ ಕಾರ್ಯಕ್ಕೆ ದೇಣಿಗೆಯನ್ನು 'Ramakrishna Mission' ಹೆಸರಿನಲ್ಲಿ ಚೆಕ್ ಅಥವಾ ಡಿ.ಡಿ. ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದೆಂದು ವಿನಂತಿಸಲಾಗಿದೆ:

**The General Secretary, Ramakrishna Mission, Belur Math, Howrah, W.B. 711 202**

ದೇಶದ ವಿವಿಧ ಕಡೆಗಳಲ್ಲಿ ನಡೆಯುತ್ತಿರುವ ಪರಿಹಾರ ಕಾರ್ಯಗಳ ಮಾಹಿತಿಯನ್ನು ತಿಳಿಯಲು ಈ ವೆಬ್‌ಸೈಟ್ ವಿಳಾಸಕ್ಕೆ ಭೇಟಿ ಕೊಡಿ.

**www.belurmath.org/ relief.htm**

## ಶಾರದಾ ಜ್ಞಾನಸುಧಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

**ಶಾರದಾ ಜ್ಞಾನಸುಧಾ** ಎಂಬ ರಸಪ್ರಶ್ನೆ ಕಾರ್ಯಕ್ರಮವನ್ನು ಕಳೆದ ನಾಲ್ಕು ವರ್ಷಗಳಿಂದ ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಹಮ್ಮಿಕೊಳ್ಳುತ್ತಿದೆ. ಈ ವರ್ಷ **ವಿದ್ಯಾರ್ಥಿಲಕ್ಷಣ** ಮತ್ತು **ವ್ಯಕ್ತಿತ್ವ ವಿಕಸನ** ಎಂಬ ಎರಡು ಪುಸ್ತಕಗಳನ್ನು ಆಧರಿಸಿ ನಡೆಸಿದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಕರ್ನಾಟಕದಾದ್ಯಂತ ಇರುವ ೬೫೧ ಶಾಲೆಗಳಿಗೆ ಸೇರಿದ ಸುಮಾರು ೧,೧೦,೦೦೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅವರಲ್ಲಿ ಅತ್ಯುತ್ತಮ ಪ್ರಶಸ್ತಿಗಳಿಗೆ ೬ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು. ಈ ಪ್ರಶಸ್ತಿಗಳಲ್ಲದೆ ಅತಿ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ ಶಾಲೆಗಳಿಗೆ ಮೂರು ವಿಶೇಷ ಬಹುಮಾನಗಳನ್ನು ಕೊಡಲಾಯಿತು. ಇದನ್ನು ಹೊರತುಪಡಿಸಿ, ೩,೩೨೭ ವಿಶೇಷ ಬಹುಮಾನಗಳನ್ನು ಪ್ರತಿ ಶಾಲೆಯ ಶೇಕಡ ೫ ಶ್ರೇಷ್ಠ ವಿದ್ಯಾರ್ಥಿಗಳಿಗೆ ಕೊಡಲಾಯಿತು.



೨೦೦೭ ರ **ಶಾರದಾ ಜ್ಞಾನಸುಧಾ** ಕಾರ್ಯಕ್ರಮದ ಕೊನೆಯ ಅಂಗವಾಗಿ ಅತ್ಯುನ್ನತ ಪ್ರಶಸ್ತಿ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮನ್ನು ಅಕ್ಟೋಬರ್ ೧೪, ೨೦೦೭ ರ ಭಾನುವಾರ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀಯುತ ಭಾಸ್ಕರ್ ರಾವ್, ಪೋಲೀಸ್ ಕಮೀಷನರ್, ಮೈಸೂರು ಅವರು ಮಾತನಾಡುತ್ತ, ಈ ಕಾರ್ಯಕ್ರಮದ ಮೂಲಕ ನೈತಿಕ ಹಾಗೂ ಆಧ್ಯಾತ್ಮಿಕ ವಿಚಾರಗಳನ್ನು ಒಂದು ಲಕ್ಷಕ್ಕೂ ಹೆಚ್ಚು ಸಂಖ್ಯೆಯ ಮಕ್ಕಳಿಗೆ ತಲುಪಿಸುತ್ತಿರುವ, ಆಶ್ರಮದ ಕಾರ್ಯವನ್ನು ಕುರಿತು ಮನತುಂಬಿ ಸಂತಸ ವ್ಯಕ್ತಪಡಿಸಿದರು. ಸ್ವಾಮಿ ನಿತ್ಯಸ್ಥಾನಂದಜಿ ಅವರು ಅಧ್ಯಕ್ಷೀಯ ಭಾಷಣದಲ್ಲಿ, ವಿದ್ಯಾರ್ಥಿಗಳು ಉನ್ನತ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದರು.